**V Semester of 3 Year LL.B./IX Semester of 5 Year B.A. LL.B./B.B.A., LL.B./ B.A. LL.B. (Maj.-Min. System) Examination, Nov./Dec. 2020**
**CIVIL PROCEDURE CODE AND LIMITATION ACT (Old & New Batch)**

Duration : 3 Hours Max. Marks : 100

**Instructions :** **1. Answer Q. No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answer should be written either in English or Kannada completely.**

ಸೂಚನೆಗಳು : 1. ಪ್ರಶ್ನೆ 9 ಮತ್ತು ಉಳಿದ ಪ್ರಶ್ನೆಗಳಲ್ಲಿ ಯಾವುದೇ ಐದನ್ನು ಉತ್ತರಿಸಿರಿ.
2. ಪ್ರಶ್ನೆ 9 ಕ್ಕೆ 20 ಅಂಕಗಳು ಮತ್ತು ಉಳಿದ ಪ್ರಶ್ನೆಗಳಿಗೆ ತಲಾ 16 ಅಂಕಗಳು.
3. ಉತ್ತರಗಳನ್ನು ಸಂಪೂರ್ಣವಾಗಿ ಆಂಗ್ಲ ಭಾಷೆ ಅಥವಾ ಕನ್ನಡದಲ್ಲಿಯೇ ಬರೆಯಿರಿ.

Q. No. 1. Explain the doctrine of res subjudice. Marks : 16

ನ್ಯಾಯವಿಚಾರಣಾಧೀನತೆಯ ಸಿದ್ಧಾಂತವನ್ನು ವಿವರಿಸಿರಿ.

Q. No. 2. Briefly describe the various stages of a suit. Marks : 16

ದಾವೆಯೊಂದರ ವಿವಿಧ ಹಂತಗಳನ್ನು ಸಂಕ್ಷಿಪ್ತವಾಗಿ ವರ್ಣಿಸಿರಿ.

Q. No. 3. Discuss the provisions of the Civil Procedure Code, 1908 in respect of appeals against decrees. Marks : 16

ಡಿಕ್ರಿಗಳ ವಿರುದ್ಧ ಮೇಲ್ಮನವಿ ಹೂಡುವ ಕುರಿತು ದಿವಾಣಿ ಪ್ರಕ್ರಿಯಾ ಸಂಹಿತೆ, 1908 ರ ನಿಬಂಧನೆಗಳನ್ನು ಚರ್ಚಿಸಿರಿ.

Q. No. 4. What is the special procedure for institution of suits by or against governments and public servants in their official capacity ? Marks : 16

ಸರಕಾರಗಳು ಮತ್ತು ಸಾರ್ವಜನಿಕ ಸೇವಕರು ತಮ್ಮ ಅಧಿಕಾರದ ನಿರ್ವಹಣೆಯ ಸಂದರ್ಭದಲ್ಲಿ ದಾವೆ ಹೂಡುವ ಹಾಗೂ ಅವರ ವಿರುದ್ಧ ದಾವೆಗಳನ್ನು ಹೂಡುವ ಬಗ್ಗೆ ಇರುವ ವಿಶೇಷ ಪ್ರಕ್ರಿಯೆ ಏನು ?

Q. No. 5. Explain the provisions of the Civil Procedure Code, 1908 for granting temporary injunction. Marks : 16

ತಾತ್ಕಾಲಿಕ ನಿರ್ಬಂಧಾಜ್ಞೆಯನ್ನು ನೀಡುವ ಕುರಿತು ದಿವಾಣಿ ಪ್ರಕ್ರಿಯಾ ಸಂಹಿತೆ, 1908 ರ ನಿಬಂಧನೆಗಳನ್ನು ವಿವರಿಸಿರಿ.

Q. No. 6. Explain the procedure for attachment and sale of immovable property for execution of a decree. Marks : 16

ಡಿಕ್ರಿಯ ಅಮಲ್ಜಾರಿಗಾಗಿ ಸ್ಥಿರ ಆಸ್ತಿಯ ಜಪ್ತಿ ಮತ್ತು ಮಾರಾಟದ ಪ್ರಕ್ರಿಯೆಯನ್ನು ವಿವರಿಸಿರಿ.

Q. No. 7. "Limitation bars the remedy, but does not extinguish the right". Explain with exceptions, if any. Marks : 16

"ಕಾಲಪರಿಮಿತಿಯು ಪರಿಹಾರವನ್ನು ಪ್ರತಿಬಂಧಿಸುತ್ತದೆಯೇ ಹೊರತು ಹಕ್ಕನ್ನು ನಾಶಗೊಳಿಸುವುದಿಲ್ಲ." – ಇದಕ್ಕೆ ಯಾವುದೇ ಅಪವಾದವಿದ್ದಲ್ಲಿ ಅದರೊಂದಿಗೆ ಈ ಹೇಳಿಕೆಯನ್ನು ವಿವರಿಸಿರಿ.

Q. No. 8. Write short notes on any two of the following : Marks : 8x2=16

(a) Foreign Judgement

(b) Caveat Petition

(c) Effect of Fraud or Mistake on Limitation.

ಈ ಕೆಳಗಿನವುಗಳಲ್ಲಿ ಯಾವುದೇ ಎರಡನ್ನು ಕುರಿತು ಲಘು ಟಿಪ್ಪಣಿ ಬರೆಯಿರಿ.

(a) ವಿದೇಶಿ ತೀರ್ಪು

(b) ಕೇವಿಯಟ್ ಅರ್ಜಿ

(c) ಕಾಲಪರಿಮಿತಿಯ ಮೇಲೆ ಮೋಸ ಅಥವಾ ತಪ್ಪು ಗ್ರಹಿಕೆಯ ಪರಿಣಾಮ.

Q. No. 9. Answer any two of the following with reasons : Marks : 10x2=20

ಈ ಕೆಳಗಿನ ಯಾವುದಾದರೂ ಎರಡನ್ನು ಕಾರಣಗಳೊಂದಿಗೆ ಉತ್ತರಿಸಿ:

(a) Rajan has instituted a suit against his wife Rajani in the Civil Court at Dharwad. Rajani is residing at Tumakuru with her parents. She has no income of her own and therefore, she is finding it difficult to travel to Dharwad frequently to attend the proceedings. Advise her.

ರಾಜನ್‌ನು ತನ್ನ ಪತ್ನಿ ರಜನಿಯ ವಿರುದ್ಧ ಧಾರವಾಡದ ದಿವಾಣಿ ನ್ಯಾಯಾಲಯದಲ್ಲಿ ದಾವೆಯೊಂದನ್ನು ಹೂಡಿದ್ದಾನೆ. ರಜನಿಯು ತುಮಕೂರಿನಲ್ಲಿ ತನ್ನ ಪಾಲಕರೊಂದಿಗೆ ವಾಸಿಸುತ್ತಿದ್ದಾಳೆ. ಅವಳಿಗೆ ತನ್ನದೇ ಆದ ಆದಾಯವಿಲ್ಲ ಹೀಗಾಗಿ ಅವಳಿಗೆ ಪದೇ ಪದೇ ಧಾರವಾಡಕ್ಕೆ ದಾವೆಯಲ್ಲಿ ಹಾಜರಾಗಲು ಹೋಗುವುದು ಕಷ್ಟಕರವಾಗಿದೆ. ಅವಳಿಗೆ ಸಲಹೆ ನೀಡಿರಿ.

(b) Ramesh has published books under the banner "Oxford and Cambridge University Press". Oxford University and Cambridge University have instituted a joint suit against Ramesh. Is the joinder of plaintiffs valid ?

ರಮೇಶನು "ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳ ಮುದ್ರಣಾಲಯ" ಎಂಬ ಹೆಸರಿನಲ್ಲಿ ಪುಸ್ತಕಗಳನ್ನು ಪ್ರಕಟಿಸಿದ್ದಾನೆ. ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳು ಅವನ ವಿರುದ್ಧ ಜಂಟಿಯಾಗಿ ದಾವೆಯನ್ನು ಹೂಡಿವೆ. ಈ ವಾದಿಗಳ ಸೇರ್ಪಡೆ ಮಾನ್ಯವೇ ?

(c) Gopal has taken a loan from Rajeev on 10-2-2014. He has given a written acknowledgement of loan to Rajeev on 15-4-2017: Rajeev has instituted a suit for recovery of the loan against Gopal on 10-8-2017. Is the suit within limitation ?

ಗೋಪಾಲನು ರಾಜೀವನಿಂದ 10-2-2014 ರಂದು ಸಾಲವನ್ನು ಪಡೆದಿದ್ದಾನೆ. ಆ ಸಾಲದ ಒಪ್ಪಿಗೆಯನ್ನು ಅವನು ರಾಜೀವನಿಗೆ 15-4-2017 ರಂದು ನೀಡಿದ್ದಾನೆ. ರಾಜೀವನು ಆ ಸಾಲದ ವಸೂಲಿಗಾಗಿ ಗೋಪಾಲನ ವಿರುದ್ಧ ದಾವೆಯನ್ನು 10-8-2017 ರಂದು ಹೂಡಿದ್ದಾನೆ. ಈ ದಾವೆಯು ಕಾಲಪರಿಮಿತಿಯ ಒಳಗೆ ಇದೆಯೇ ?

---